ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಸಮಿತಿ ಮಾಡಿ ಎಂದು ಹೇಳಿದ್ದಾರೆ. ಇನ್ನೊಂದು ಘಂಟೆಯಲ್ಲಿ ಹೆಸರುಗಳನ್ನು ಬರೆದು ಕೊಡಿ. ಆ ಸಮಿತಿಯಲ್ಲಿ ಎಲ್ಲಾ ಪಕ್ಷದವರು ಇರಲಿ. ನಾನು ಅನೌನ್ಸ್ ಮಾಡುತ್ತೇನೆ.

(ಗೊಂದಲ)

ಅಧ್ಯಕ್ಷರು.—ಇದು ಸರಿಯಲ್ಲ. ಮಾನ್ಯ ಮಂತ್ರಿಗಳು ಒಂದು ಸಮಿತಿ ಮಾಡಿ ಎಂದು ಮಾನ್ಯ ವೀರಪ್ಪಮೊಯ್ಲಿಯವರು ಹೇಳಿದ್ದಾರೆ.

(ಗೊಂದಲ)

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೇ, ಅವರವರ ಜಾಗದಲ್ಲಿ ಹೋಗಿ ಮಾತನಾಡಲಿ.

ಅಧ್ಯಕ್ಷರು.—ಹೆಸರುಗಳನ್ನು ಕೊಡಿ. ಇವತ್ತೆ ಅನೌನ್ಸ್ ಮಾಡುತ್ತೇನೆ. ತಾವು ತಮ್ಮ ತಮ್ಮ ಜಾಗಗಳಿಗೆ ಹೋಗಿ ಕುಳಿತುಕೊಂಡು ಮಾತನಾಡಿ. ಸಮಿತಿಯಲ್ಲಿ ಎಲ್ಲಾ ಪಕ್ಷದ ಸದಸ್ಯರು ಇರಲಿ, ಈಗ ನಾವು ಮುಂದಿನ ಗಮನ ಸೆಳೆಯುವ ಸೂಚನೆಗೆ ಹೋಗೋಣ.

೧–೩೦ ಪಿ. ಎಂ.

(೨) ವರಾಹಿ ವಿದ್ಯುಚ್ಛಕ್ತಿ ಯೋಜನೆಯನ್ನು ಶೀಘ್ರವಾಗಿ ಕಾರ್ಯಗತಗೊಳಿಸುವ ಬಗ್ಗೆ

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೇ, ನಿಯಮಾವಳಿ ೭೨ರ ಪ್ರಕಾರ ವರಾಹಿ ನೀರಾವರಿ ಯೋಜನೆ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ವರಾಹಿ ನದಿಯ ಅಡ್ಡಲಾಗಿ ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕಿನಲ್ಲಿ ಜಲವಿದ್ಯುತ್ ಯೋಜನೆ ಕಾರ್ಯ ಕರ್ನಾಟಕ ವಿದ್ಯುತ್ ನಿಗಮದ ಅಡಿಯಲ್ಲಿ ಈ ವರೆಗೆ ಪ್ರಗತಿ ಹಂತದಲ್ಲಿದೆ. ಈ ಜಲ ವಿದ್ಯುತ್ ಯೋಜನೆಯಿಂದ ಬಿಡಲಾಗುವ ನೀರನ್ನು, ನೀರಾವರಿ ಸೌಲಭ್ಯ ಒದಗಿಸುವ ಉದ್ದೇಶದಿಂದ ಕುಂದಾಪುರ ತಾಲ್ಲೂಕಿನ ಹಿದ್ದಾಪುರ ಗ್ರಾಮದ ಹೊರಿಯಬೈ ನಿವೇಶನದಲ್ಲಿ, ಜಲವಿದ್ಯುತ್ ಯೋಜನೆ ನಿವೇಶನದಿಂದ ಸುಮಾರು ೬೦ ಕಿ. ಮೀ. ಕೆಳಭಾಗದಲ್ಲಿ ವರಾಹಿ ನದಿಗೆ ಅಡ್ಡಲಾಗಿ ಒಂದು ಆಣೆಕಟ್ಟನ್ನು ನಿರ್ಮಾಣ ಮಾಡಿ ೧೫,೭೦೨ ಹೆಕ್ಟೇರು ಭೂಮಿಗೆ ನೀರಾವರಿ ಒದಗಿಸುವ ೯೬.೪೩ ಕೋಟಿ ರೂ. ಗಳ ಯೋಜನೆಗೆ ೧೯೭೯ನೇ ಮಾರ್ಚ್ ಮಾಹೆಯಲ್ಲಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ. ಮೂಲ ಅಂದಾಜು ೧೯೭೭–೭೮ನೇ ಸಾಲಿನ ದರ ಪಟ್ಟಿಯಲ್ಲಿ ತಯಾರಾದ ಮೇಲೆ ವಿವರಿಸಿರುವಂತೆ ಕೇವಲ ಡೈವರ್ಷನ್ ವಿಯರ್ ನಿರ್ಮಾಣ ಮಾಡಿ ಎರಡು ದಂಡೆಯಿಂದ ಹೊರಡುವ ಕಾಲುವೆಗಳು ಹಾಗೂ ಎಡದಂಡೆ ಕಾಲುವೆಯಿಂದ ಪಡೆ ನೀರಾವರಿ ಮೂಲಕ ಒಟ್ಟು ೧೫,೭೦೨ ಹೆಕ್ಟೇರ್ ಪ್ರದೇಶಕ್ಕೆ, ಉಡುಪಿ ಮತ್ತು ಕುಂದಾಪುರ ತಾಲ್ಲೂಕಿಗೆ ಕೈಗೊಳ್ಳಲಾಗಿದ್ದು ನೀರಾವರಿ ಸೌಲಭ್ಯ ಒದಗಿಸಲು ಉದ್ದೇಶಿಸಿದೆ. ಮೂಲ ಅಂದಾಜಿನ ಪ್ರಕಾರ ಆಣೆಕಟ್ಟಿನ ನೆತ್ತಿಮಟ್ಟ ೬೮೦.೮೫ ಮೀ. ಆಗಿದ್ದು, ಕೇವಲ ೧೦೯ ಹೆಕ್ಟೇರು ಭೂಮಿ ಮಾತ್ರ ಮುಳುಗಡೆಯಾಗುವುದೆಂದು ಅಂದಾಜು ಮಾಡಲಾಗಿತ್ತು. ಮೂಲ ಅಂದಾಜಿನ ರೂಪ ರೇಷೆಯಂತೆ, ಯೋಜನೆಯ ಪೂರ್ವಭಾವಿ ಕೆಲಸಗಳನ್ನು ೧೯೭೯–೮೦ನೇ ಸಾಲಿನಲ್ಲಿ ಪ್ರಾರಂಭ ಮಾಡಲಾಯಿತು.

ಈ ಹಂತದಲ್ಲಿ ಕರ್ನಾಟಕ ವಿದ್ಯುತ್ ನಿಗಮ ರಾಜ್ಯ ಸರ್ಕಾರಕ್ಕೆ ಸಲಹೆ ಮಾಡುತ್ತಾ, ವರಾಹಿ ನೀರಾವರಿ ಯೋಜನೆಯನ್ನು ವಿವಿಧೋದ್ದೇಶದಿಂದ ಯೋಜನೆಯನ್ನಾಗಿ ಮಾರ್ಪಾಡು ಮಾಡಿ ಸಂಗ್ರಾಹಣಾ ಸಾಮರ್ಥ್ಯವುಳ್ಳ ಜಲಾಶಯ ನಿರ್ಮಾಣ ಮಾಡಿ ಈ ನಿವೇಶನದಲ್ಲೂ ಸಹ ಜಲವಿದ್ಯುತ್ ತಯಾರು ಮಾಡುವ ಸಾಧ್ಯತೆ ಬಗ್ಗೆ ಪರಿಶೀಲಿಸಲು ಕೋರಿದರು. ೧೯೮೧ನೇ ಫೆಬ್ರುವರಿ ಮಾಹೆಯಲ್ಲಿ ಸರ್ಕಾರದ ಮಟ್ಟದಲ್ಲಿ ಸಂಭವಿಸಿದ ಪತ್ರವ್ಯವಹಾರ ಮತ್ತು ನಡೆಸಿದ ಸಂತರ ಹಣೆಕಟ್ಟಿನ ನಿರ್ಮಾಣಕ್ಕೆ ಕರೆಯಲಾಗಿದ್ದ ಟೆಂಡರನ್ನು ರದ್ದುಪಡಿಸುವುದು, ಆಣೆಕಟ್ಟಿನ ಕೋಡಿಯ ಮಟ್ಟವನ್ನು ಹೆಚ್ಚಿಸಿ ನೀರಾವರಿ ಮತ್ತು ಜಲವಿದ್ಯುತ್ ತಯಾರು ಮಾಡುವ ವಿಷಯದಲ್ಲಿ ಸಮೀಕ್ಷೆ ನಡೆಸುವಂತೆ ನಿರ್ಣಯವಾಯಿತು. ಯೋಜನೆಯ ಪರ್ಯಾಯ ರೂಪರೇಷೆಗಳನ್ನು ಕರ್ನಾಟಕ ವಿದ್ಯುತ್ ನಿಗಮ ಮತ್ತು ತಾಂತ್ರಿಕ ಸಮಿತಿಯಲ್ಲಿ ಹಲವಾರು ಬಾರಿ ಚರ್ಚಿಸಲಾಗಿದ್ದು, ೧೯೮೫–೮೬ನೇ ದರ ಪಟ್ಟಿಯ ಆಧಾರದ ಮೇಲೆ ಸುಮಾರು ೫೮ ಕೋಟಿ ರೂ. ಗಳ ಪರಿಷ್ಕೃತ ಅಂದಾಜನ್ನು ತಯಾರಿಸಲಾಯಿತು. ಈ ಪರಿಷ್ಕೃತ ಅಂದಾಜಿನ ಪ್ರಕಾರ ಜಲಾಶಯದ ಪೂರ್ಣ ನೀರಿನ ಮಟ್ಟ ಆರ್. ಎಲ್. ೭೨೦ ಮೀ. ಆದರಲ್ಲಿ, ಮುಳುಗಡೆಯಾಗುವ ಒಟ್ಟು ಪ್ರದೇಶ

೧೯೮೩ ಹೆಕ್ಟೇರು ಎಂದು, ಈ ಪೈಕಿ ೧೨೧೫ ಹೆಕ್ಟೇರು ಭೂಮಿ ಕಾದಿರಿಸಿದ ಅರಣ್ಯ ಪ್ರದೇಶ ಮುಳುಗಡೆಯಾಗುವುದೆಂದು ಅಂದಾಜು ಮಾಡಲಾಯಿತು. ಇದಲ್ಲದೆ ಆಣೆಕಟ್ಟು, ನಾಲೆ ಮತ್ತಿತರ ಕಾಮಗಾರಿಗಳಿಗಾಗಿ ಸುಮಾರು ೩೭೫ ಹೆಕ್ಟೇರ್ ಕಾದಿರಿಸಿದ ಅರಣ್ಯ ಭೂಮಿ ಬೇಕಾಗುವುದೆಂದು ಅಂದಾಜು ಮಾಡಿದಂತೆ ಒಟ್ಟು ೧೫೯೦ ಹೆಕ್ಟೇರ್ ಕಾದಿರಿಸಿದ ಅರಣ್ಯ ಪ್ರದೇಶ ಬಿಡುಗಡೆ ಮಾಡುವ ಪ್ರಮೇಯ ಉದ್ಭವಿಸಿತು. ಈ ಸಮಸ್ಯೆಯನ್ನು ಸರ್ಕಾರದಲ್ಲಿ ಮುಖ್ಯ ಕಾರ್ಯದರ್ಶಿಯವರ ಸಮ್ಮುಖದಲ್ಲಿ ನಡೆದ ಸಭೆಯಲ್ಲಿ ಚರ್ಚಿಸಲಾಗಿದ್ದು, ೧೯೮೫ನೇ ಇಸವಿ ಮಾರ್ಚಿ ಮಾಹೆಯಲ್ಲಿ ಪರಿಸರ ಶಾಸ್ತ್ರ, ಅರ್ಥ ಶಾಸ್ತ್ರ ತಜ್ಞರ ಹಾಗೂ ತಾಂತ್ರಿಕ ತಜ್ಞರುಗಳನ್ನೊಳಗೊಂಡ ಸಮಿತಿಯನ್ನು ರಚಿಸಿ ಉದ್ದೇಶ ಹಾಗೂ ಸಮಗ್ರ ಉಪಯುಕ್ತತೆ ಬಗ್ಗೆ ಪರಿಶೀಲಿಸಲು ಮತ್ತು ಅತ್ಯಂತ ಅವಶ್ಯವಿರುವ ಕಾದಿರಿಸಿದ ಅರಣ್ಯ ಪ್ರದೇಶ ಮಾತ್ರ ಬಿಡುಗಡೆ ಪಡೆಯುವ ಅಂಶ ಪರಿಶೀಲಿಸುವಂತೆ ಸಮಿತಿಗೆ ಆದೇಶ ನೀಡಲಾಯಿತು. ಸಮಿತಿಯು ಸ್ಥಳ ಪರಿಕ್ಷೆ ಮತ್ತು ಹಲವಾರು ಸಭೆಗಳನ್ನು ನಡೆಸಿದ ನಂತರ, ಕೇವಲ ೧೦ ದಿನ ನೀರಾವರಿಗೆ ಅಗತ್ಯವಿರುವ ನೀರನ್ನು ಮಾತ್ರ ಸಂಗ್ರಹಣಾ ಸಾಮರ್ಥ್ಯವುಳ್ಳ ಹಾಗೂ ಮೂಲವಾಗಿ ಉದ್ದೇಶಿಸಿದ ೧೫,೭೦೨ ಹೆಕ್ಟೇರು ಭೂಮಿಗೆ ಮಾತ್ರ ನೀರಾವರಿ ಸೌಲಭ್ಯವನ್ನು ಒದಗಿಸುವ ಯೋಜನೆಗೆ ಅವಶ್ಯವಿರುವ ಆಣೆಕಟ್ಟನ್ನು ನಿರ್ಮಾಣ ಮಾಡಿದಲ್ಲಿ ಕೇವಲ ೨೧೦ ಹೆಕ್ಟೇರು ಕಾದಿರಿಸಿದ ಅರಣ್ಯ ಪ್ರದೇಶ ಮುಳುಗಡೆಯಾಗುವುದೆಂಬ ಅಂಶವನ್ನು ಪರಿಗಣಿಸಿ, ಸಮಿತಿಯು ಈ ಯೋಜನೆಗೆ ೧೯೮೬ನೇ ಮೇ ಮಾಹೆಯಲ್ಲಿ ಶಿಫಾರ್ಸು ಮಾಡಿದೆ.

ಸಮಿತಿಯ ಶಿಫಾರ್ಸಿನಂತೆ ಪರಿಷ್ಕೃತ ಪ್ರಸ್ತಾವನೆಯ ಯೋಜನೆಯ ಅಂದಾಜು ೧೯೮೬-೮೭ನೇ ದರ ಪಟ್ಟಿ ಆಧಾರದ ಮೇಲೆ ೭೦ ಕೋಟಿ ರೂ. ಗಳಾಗುವುದು. ೨೧೦ ಹೆಕ್ಟೇರು ಕಾದಿರಿಸಿದ ಅರಣ್ಯ ಪ್ರದೇಶ ಮುಳುಗಡೆಯಾಗುವುದಲ್ಲದೆ ಸುಮಾರು ೯೦ ಹೆಕ್ಟೇರು, ನಾಲಾ, ಆಣೆಕಟ್ಟು ನಿರ್ಮಾಣಕ್ಕಾಗಿ ಕಾದಿರಿಸಿದ ಅರಣ್ಯ ಪ್ರದೇಶ, ಒಟ್ಟು ೩೦೦ ಹೆಕ್ಟೇರು ಅರಣ್ಯ ಪ್ರದೇಶ ಕೇಂದ್ರ ಸರ್ಕಾರದ ಮತಿಯಿಂದ ಬಿಡುಗಡೆ ಪಡೆಯಬೇಕಾಗುವುದು. ಯೋಜನೆಯ ಆಣೆಕಟ್ಟಿನ ಕೆಲಸಗಳನ್ನು ಪ್ರಾರಂಭ ಮಾಡುವುದಕ್ಕೆ ಮುಖ್ಯ ಅಡಚಣೆ ಏನೆಂದರೆ, ೧೯೮೦ರ ಅರಣ್ಯ ಕಾಯಿದೆ ಪ್ರಕಾರ ಕಾದಿರಿಸಿದ ಅರಣ್ಯ ಪ್ರದೇಶ ಕೇಂದ್ರ ಸರ್ಕಾರದಿಂದ ಬಿಡುಗಡೆ ಪಡೆಯುವುದು. ಈ ದಿಸೆಯಲ್ಲಿ ರಾಜ್ಯ ಸರ್ಕಾರದ ಅರಣ್ಯ ಇಲಾಖೆಯು ಹಾಗೂ ನೀರಾವರಿ ಇಲಾಖೆಯು ಈ ನಿಗದಿತ ಸಮೂನೆಯಲ್ಲಿ ಕೇಂದ್ರ ಸರ್ಕಾರಕ್ಕೆ ಮಾಹಿತಿಯನ್ನು ಒದಗಿಸುವ ಕ್ರಮ ಕೈಗೊಳ್ಳುತ್ತದೆ. ಈ ವಿಷಯದಲ್ಲಿ ದಿನಾಂಕ ೧೦-೫-೧೯೮೮ರಂದು ಮುಖ್ಯಮಂತ್ರಿಗಳ ಸಮ್ಮುಖದಲ್ಲಿ ಅರಣ್ಯ ಮತ್ತು ನೀರಾವರಿ ಇಲಾಖೆಯ ಅಧಿಕಾರಿಗಳೊಡನೆ ಸಭೆ ನಡೆಸಲಾಗಿದ್ದು ಪ್ರಧಾನ ಅರಣ್ಯ ಸಂರಕ್ಷಣಾಧಿಕಾರಿಯವರನ್ನು ತ್ವರಿತ ಕ್ರಮ ತೆಗೆದುಕೊಳ್ಳುವಂತೆ ನಿರ್ದೇಶನ ನೀಡಲಾಗಿದೆ. ತಾಂತ್ರಿಕ ಸಮಿತಿಯು ಪರಿಷ್ಕೃತ ಅಂದಾಜಿಗೆ ಬಿಡುಗಡೆ ಶಿಫಾರ್ಸು ಮಾಡಿ ಕೇಂದ್ರ ಸರ್ಕಾರದಿಂದ ಕಾದಿರಿಸಿದ ಅರಣ್ಯ ಪ್ರದೇಶ ಬಿಡುಗಡೆ ಪಡೆಯುವವರೆಗೂ ಆಣೆಕಟ್ಟಿನ ಕೆಲಸಗಳನ್ನು ಪ್ರಾರಂಭ ಮಾಡಬಾರದೆಂದು ಸಲಹೆ ಮಾಡಿರುತ್ತಾರೆ.

೧೯೭೯-೮೦ನೇ ಸಾಲಿನಲ್ಲಿ ಯೋಜನೆಯ ಪೂರ್ವಭಾವಿ ಕೆಲಸಗಳು ಪ್ರಾರಂಭವಾಗಿದ್ದು ಮಾರ್ಚಿ ೧೯೮೮ರ ಅಂತ್ಯದವರೆಗೆ ೧೯೪ ಲಕ್ಷ ರೂ. ಗಳು ಒಟ್ಟು ವೆಚ್ಚವಾಗಿರುತ್ತದೆ.

೧೯೮೮-೮೯ನೇ ಸಾಲಿನಲ್ಲಿ ಈ ಯೋಜನೆಗೆ ೫೦ ಲಕ್ಷ ರೂ. ಗಳ ಅನುದಾನ ನೀಡಲಾಗಿದೆ. ಫೆಬ್ರವರಿ ೧೯೮೯ರವರೆಗೆ ೧೭ ಲಕ್ಷ ರೂ. ಗಳ ವ್ಯಯವಾಗಿವೆ. ಕೇಂದ್ರ ಸರ್ಕಾರದಿಂದ ಕಾದಿರಿಸಿದ ಅರಣ್ಯ ಪ್ರದೇಶ ಬಿಡುಗಡೆ ಪಡೆಯುವ ಬಗ್ಗೆ ಹಾಗೂ ಆಣೆಕಟ್ಟಿನ ಕಾಮಗಾರಿಗಳಿಗೆ ಟೆಂಡರ್ ಕರೆಯುವ ಕ್ರಮ ತೆಗೆದುಕೊಳ್ಳಲು ಉದ್ದೇಶಿಸಿದೆ.

† ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ದಕ್ಷಿಣಕನ್ನಡ ಜಿಲ್ಲೆಯಲ್ಲಿ ತಮಗೆ ಗೊತ್ತಿರುವ ಹಾಗೆ ಯಾವುದೇ ರೀತಿಯಾದಂಥ ಮಧ್ಯಮ ಭರಗಾಲಿಯ ಅಥವಾ ಭಾರಿ ಪ್ರಮಾಣದ ನೀರಾವರಿ ಯೋಜನೆಗಳು ಇಲ್ಲ. ಅದರೆ ಪಾರಾಹಿ ನೀರಾವರಿ ಯೋಜನೆಯೊಂದೇ ಏಕೈಕ ಯೋಜನೆಯಾಗಿದೆ ಎಂದು ಹೇಳಿದರೆ ಅದು ತಪ್ಪಾಗಲಾರದು. ನಮ್ಮ ಜಿಲ್ಲೆಯಲ್ಲಿ ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ಕಾಣಬಹುದೇ ಹೊರತು ಬೇರೆಯಾವ ದೊಡ್ಡ ಅಥವಾ ಮಧ್ಯಮ ಗಾತ್ರದ ಯೋಜನೆಗಳನ್ನು ಕಾಣುವ ಸಂದರ್ಭ ಇಲ್ಲಿ ಇಲ್ಲ. ನೀರಾವರಿ ಯೋಜನೆ ಮತ್ತು ಸಕ್ಕರೆ ಕಾರ್ಖಾನೆಯು ಅಲ್ಲಿ ಜೊತೆಜೊತೆಯಾಗಿ ಕಾರ್ಯಗತವಾಗಬೇಕೆಂದು ಆಗಿನ ಸರಕಾರ ಒಂದು ರೂಪ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ರೇಶೆಯನ್ನು ತಯಾರು ಮಾಡಿ ಅದಕ್ಕೆ ೯ ಕೋಟಿ ರೂಪಾಯಿಗಳ ಆಡಳಿತಾತ್ಮಕ ಮಂಜೂರಾತಿಯನ್ನು ಕೂಡಾ ಕೊಟ್ಟಿತ್ತು. ೧೯೮೦-೮೫ನೇ ಇಸವಿಯಲ್ಲಿ ಹೀಗೆ ಕೊಟ್ಟಾದ ಮೇಲೆ ಸರಕಾರದ ತಜ್ಞರುಗಳಿಗೆ ಏನೋ ಒಂದು ಹೊಸ ಯೋಚನೆಯು ಬಂತು. ಏನೆಂದರೆ ಇದನ್ನು ಮಲ್ಟಿಪರ್ಪಸ್ ಯೋಜನೆಯನ್ನಾಗಿ ಏಕೆ ಮಾಡಬಾರದು ಎಂದು ಯೋಚನೆ ಮಾಡಿ ಆದು ನಮ್ಮ ಸರ್ಕಾರ ಇರುವಾಗಲೇ ತಜ್ಞರು ಪಟ್ಟ ಅಭಿಪ್ರಾಯದ ಮೇಲೆ ಅದನ್ನು ಪರಿಶೀಲನೆ ಮಾಡೋಣ ಎಂದು ಹೇಳಿದ ಯೋಜನೆಯು ನೆನಗುದಿಗೆ ಬಿದ್ದು ಇಪ್ಪತ್ತೈದಕ್ಕೂ ಕೂಡ ಯಾವುದೇ ರೀತಿಯಲ್ಲಿ ಆದು ಒಂದು ಪ್ರಗತಿಯನ್ನು ಕಂಡಿಲ್ಲ, ಇವತ್ತಿಗೂ ಕೂಡ ಆಗಬೇಕಾದಂಥ ಅನ್‌ಗೋಯಿಂಗ್ ಪ್ರಾಜೆಕ್ಟ್‌ಗಳು ಏನಿವೆ ಅವುಗಳು ಕಂಪ್ಲೀಟ್ ಆಗಿಲ್ಲ. ಹೊಸ ಯೋಜನೆಗಳಿಗಂತೂ ಹಣ ಒದಗಿಸುವ ಪರಿಸ್ಥಿತಿಯಲ್ಲಿ ತಾವುಗಳು ಇಲ್ಲ. ಆದುದರಿಂದ ಮೂಲಭೂತವಾಗಿ ಏನು ನೀರಾವರಿ ಯೋಜನೆಗಳ ಬಗ್ಗೆ ನಾವು ಆಲೋಚಿಸಿದ್ದೇವೆ ಮತ್ತು ಆಡಳಿತಾತ್ಮಕವಾದ ಮಂಜೂರಾತಿಯನ್ನು ಕೂಡ ಕೊಟ್ಟಿದ್ದೇವೆ, ಆವುಗಳನ್ನಾದರೂ ಅನುಷ್ಠಾನಗೊಳಿಸುವುದಕ್ಕೆ ತಾವು ಏಕೆ ಯೋಚನೆ ಮಾಡಬಾರದು ಎಂದು ಕೇಳುತ್ತೇನೆ ? ವಿದ್ಯುತ್ ಯೋಜನೆಯ ಬಗ್ಗೆ. It may take 10 years or beyond, or 15 years, I do not think it will take 10 years, ಅದಕ್ಕೆ ಸ್ಕೋಪ್ ಇಟ್ಟು ಆಕ್ಷೇಪಣೆ ಕೂಡ ಏರಿಸಬಹುದು: ಮೂಲಭೂತವಾಗಿ ೧೯೮೦-೮೫ರಲ್ಲಿ ಏನು ಆಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟಿದ್ದಾರೋ ಅದಕ್ಕೆ ಪುನಃ ಒಂದು ಟೆಂಡರ್ ಕರೆದು ಮತ್ತಿತರ ಫಾರ್ಮಲಿಟೀಸ್ ಮಾಡುವುದರ ಬದಲು ಅದಕ್ಕೆ ರಿವೈಸ್ ಎಸ್ಟಿಮೇಟ್ ಮಾಡಿ ಅದೇ ಯೋಜನೆಯನ್ನು ಕಾರ್ಯಗತ ಮಾಡಬೇಕು. ಹಾಗೆ ಮಾಡದಿದ್ದರೆ ಬಹುಶಃ ಕೃಷಿ ಬಗ್ಗೆ you have to write of as far as South Kanara is concerned. ಸಕ್ಕರೆ ಕಾರ್ಖಾನೆ ಬಗ್ಗೆ ಕೂಡ ಏನೊಂದು ಇನ್‌ವೆಸ್ಟ್‌ಮೆಂಟ್ ಮಾಡಿದ್ದೀರಿ. That will also become infructuous. ಆದುದರಿಂದ ತಾವು ಮೂಲ ಭೂತವಾಗಿ ತಯಾರು ಮಾಡಿದಂಥ ಪ್ರಾಜೆಕ್ಟ್‌ನ್ನು ರಿವೈಸ್ ಮಾಡಿ ಅನುಷ್ಠಾನ ಮಾಡಿ ಮಲ್ಟಿಪರ್ಪಸ್ ಯೋಜನೆಯನ್ನು ಮುಂದೆ ಆಲೋಚನೆ ಮಾಡತಕ್ಕಂಥ ಒಂದು ಯೋಚನೆಯನ್ನು ಇಟ್ಟುಕೊಂಡು ಅದನ್ನು ಕಾರ್ಯಗತ ಮಾಡಿ ಈ ವರ್ಷವೇ ಇದಕ್ಕೆ ಸಾಕಷ್ಟು ಅನುದಾನವನ್ನು ಕೊಟ್ಟು ಕೆಲಸವನ್ನು ಪ್ರಾರಂಭ ಮಾಡಲಿಕ್ಕೆ ಪ್ರಯತ್ನ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಸವರಾಜ್. ಮಾನ್ಯ ಅಧ್ಯಕ್ಷರೇ, ನಾವು ಎರಡು ವಿಷಯಗಳ ಬಗ್ಗೆ ಸರಕಾರದ ಗಮನವನ್ನು ಸೆಳೆದಿದ್ದೇವೆ. ಆದರೆ ಸರಕಾರದ ಉತ್ತರ ವಾರಾಹಿ ಯೋಜನೆಯ ಬಗ್ಗೆ ಮಾತ್ರ ಬಂದಿದೆ. ನಾವು ಕೊಟ್ಟ ವಿಷಯಗಳು ಒಂದಕ್ಕೊಂದು ಪೂರಕವಾಗಿರತಕ್ಕಂಥ ವಿಷಯವಾಗಿದೆ. ಬೃಹತ್ತರ ಸಕ್ಕರೆ ಕಾರ್ಖಾನೆ ಮತ್ತು ವಾರಾಹಿ ನೀರಾವರಿ ಯೋಜನೆಯ ಕುರಿತು ಹೇಳುವುದಾದರೆ, ಬೃಹತ್ತರ ಸಕ್ಕರೆ ಕಾರ್ಖಾನೆಗೆ ದಿವಸಕ್ಕೆ ೧,೨೫೦ ಟನ್‌ಗಳಷ್ಟು ಕಬ್ಬು ಅರೆಯುವ ಸಾಮರ್ಥ್ಯ ಇದೆ. ಈ ಕಾರ್ಖಾನೆಗೆ ವರ್ಷಕ್ಕೆ ನಾಲ್ಕು ತಿಂಗಳು ಕೆಲಸ ಬೇಕಾದರೆ ಸುಮಾರು ೧೧ ಸಾವಿರ ಎಕರೆ ಪ್ರದೇಶದಲ್ಲಿ ಕಬ್ಬನ್ನು ಬೆಳಸ ಬೇಕಾಗುತ್ತದೆ. ಆದರೆ ನಮ್ಮ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಸಣ್ಣ ಮತ್ತು ಮಧ್ಯಮ ನೀರಾವರಿ ಯೋಜನೆಗಳು ಆಗದೇ ಇರುವುದರಿಂದ ಇವನ್ನು ನಮ್ಮ ಹಿಂದಿನ ಸರಕಾರ ೧೯೭೧ರಲ್ಲಿಯೇ ಈ ಎರಡು ಯೋಜನೆಗಳಿಗಾಗಿ ಒಂದೇ ದಿವಸ ಶಂಕುಸ್ಥಾಪನೆಯನ್ನು ಮಾಡಿತ್ತು. ಬೃಹತ್ತರ ಸಕ್ಕರೆ ಕಾರ್ಖಾನೆಯು ಸ್ಥಾಪನೆಯಾಗಿ ೧೯೪೪-೪೫ರಲ್ಲಿ ಕಬ್ಬು ಅರೆಯಲಿಕ್ಕೆ ಪ್ರಾರಂಭವಾಯಿತು. ಆದರೆ ಇದುವರೆಗೂ ಆದಕ್ಕೆ ಪೂರಕವಾಗಿರತಕ್ಕಂಥ ವಾರಾಹಿ ಯೋಜನೆಯನ್ನು ಕಾರ್ಯರಂಭ ಮಾಡಿಲ್ಲ. ಆ ಕಾರ್ಖಾನೆಗೆ ಕಬ್ಬು ಬೆಳೆ ಕಡಿಮೆ ಪ್ರಮಾಣದಲ್ಲಿ ಬರುತ್ತಿರುವುದರಿಂದ ಅಲ್ಲಿನ ಆಡಳಿತವನ್ನು ನಡೆಸಿಕೊಂಡು ಹೋಗಲು ಬಹಳ ಕಷ್ಟವಾಗಿರುತ್ತದೆ. ಕಾರಣ ಆಗರ ಆರ್ಥಿಕ ಪರಿಸ್ಥಿತಿಯು ದುಸ್ಥಿತಿಯೇ ಆಗಿದೆ ಎಂದು ಬೇರೆ ಹೇಳ ಬೇಕಾಗಿಲ್ಲ. ಈ ವರ್ಷ ರೈತರು ಕೊಟ್ಟ ಕಬ್ಬಿನ ಬಾಬ್ತು ಒಂದು ಕೋಟಿ ರೂಪಾಯಿಗಳನ್ನು ಕಾರ್ಖಾನೆಯವರು ಬಾಕಿ ಇಟ್ಟುಕೊಂಡಿದ್ದಾರೆ. ಅದೇ ರೀತಿಯಲ್ಲಿ ಕಾರ್ಖಾನೆಯನ್ನು ನಡೆಸಿಕೊಂಡು ಹೋಗಲು ಅವರಿಗೆ ಇನ್ನು ಒಂದು ಕೋಟಿ ರೂಪಾಯಿಗಳ ಅಗತ್ಯವಿದೆ. ಈಗಾಗಲೇ ಈ ಸಹಕಾರಿ ಸಕ್ಕರೆ ಕಾರ್ಖಾನೆಗೆ ಸರಕಾರವು ೩ ಕೋಟಿ ೬೧ ಲಕ್ಷ ರೂಪಾಯಿಗಳಷ್ಟು ಪಾಲು ಬಂಡವಾಳವನ್ನು ಕೊಡಿದೆ. ಆದುದರಿಂದ ಬೇರೆ ಯಾವ ರೂಪದಲ್ಲಾದರೂ ಹಣ ಕೊಡಲಿಕ್ಕೆ ಆಗದಿದ್ದರೆ ಪಾಲು ಬಂಡವಾಳದ ರೂಪದಲ್ಲಿ ಇನ್ನೂ ಎರಡು ಕೋಟಿ ರೂಪಾಯಿಗಳನ್ನು ಸರಕಾರವಾದರು ಕೊಡಬೇಕು. ಅದೇ ರೀತಿಯಲ್ಲಿ ಈ ಕಾರ್ಖಾನೆಯು ಉತ್ತಮ ರೀತಿಯಲ್ಲಿ ನಡೆಯಬೇಕಾದರೆ ಅಲ್ಲಿಗೆ ಸಾಕಷ್ಟು ಕಬ್ಬು ಪೂರೈಕೆಯಾಗಬೇಕು. ಕಬ್ಬು ಪೂರೈಕೆಯಾಗಬೇಕಾದರೆ ಆ ಪ್ರದೇಶಗಳಲ್ಲಿ ನೀರಾವರಿ ಪ್ರದೇಶಗಳು ಹೆಚ್ಚಿಗೆ ಆಗಬೇಕು. ನೀರಾವರಿ ಪ್ರದೇಶಗಳು ಹೆಚ್ಚಳವಾಗಬೇಕಾದರೆ ವಾರಾಹಿ ನೀರಾವರಿ ಯೋಜನೆಯು ಕೂಡಲೇ

ಕಾರ್ಯಾರಂಭವಾಗಬೇಕು ಆದುದರಿಂದ ಈ ವರ್ಷವೇ ವಾರಾಹಿ ನೀರಾವರಿ ಯೋಜನೆಯನ್ನು ಅದರ ಕೆಲಸಕಾರ್ಯಗಳನ್ನು ಪ್ರಾರಂಭ ಮಾಡಬೇಕು ಮತ್ತು ಬ್ರಹ್ಮಾವರ ಸಹಕಾರಿ ಸಕ್ಕರೆ ಕಾರ್ಖಾನೆಗೆ ಎರಡು ಕೋಟಿ ರೂಪಾಯಿಗಳ ಧನಸಹಾಯವನ್ನು ಕೊಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ. ಎಸ್. ಆಚಾರ್.—ಸನ್ಮಾನ್ಯ ಅಧ್ಯಕ್ಷರೇ, ಕಳೆದ ೧೫ನೇ ತಾರೀಖಿನಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಾರಾಹಿಯಿಂದ ಬ್ರಹ್ಮಾವರ ಸಹಕಾರಿ ಸಕ್ಕರೆ ಕಾರ್ಖಾನೆಗೆ ಸಹಸ್ರಾರು ರೈತರ ಒಂದು ಜಾಥವು ನಡೆಯಿತು. ಈ ಎರಡು ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸ ಬೇಕು, ಎಂದು ಹೇಳುವುದರ ಸಲುವಾಗಿ ಈ ಜಾಥಾ ಆದಮೇಲೆ ಈಗ ಧರಣಿ ಕೂಡ ನಡೆಯುತ್ತಾ ಇದೆ. ಈ ಒಂದು ಉದ್ದೇಶದಿಂದ ನಾವುಗಳು ಜಂಟಿಯಾಗಿ ಎರಡು ವಿಷಯಗಳನ್ನು ಸದನದಲ್ಲಿ ಎತ್ತಿದ್ದೇವೆ. ಆದರೆ ದುರಾದೃಷ್ಟವಶಾತ್ ಉತ್ತರವು ಒಂದೇ ವಿಷಯಕ್ಕೆ ಸಂಬಂಧಪಟ್ಟ ಹಾಗೆ ಬಂದಿದೆ ಆದುದರಿಂದ ಮಾನ್ಯ ಮಿತ್ರ ಸದಸ್ಯರಾದ ಬಸವರಾಜ್‌ರವರು ಹೇಳಿದ ಹಾಗೆ ನಾನೂ ಎರಡು ವಿಷಯಗಳನ್ನು ಪ್ರಸ್ತಾಪ ಮಾಡಬಯಸುತ್ತೇನೆ. ಮಾನ್ಯ ವೀರಪ್ಪ ಮೊಯ್ಲಿಯವರು ಹೇಳಿದ ಹಾಗೆ ವಾರಾಹಿ ಜಲ ವಿದ್ಯುತ್ ಯೋಜನೆಯಿಂದ ನೀರು ಹರಿದು ವ್ಯರ್ಥವಾಗಿ ಸಮುದ್ರವನ್ನು ಸೇರುವುದಕ್ಕೆ ಬದಲು ಆ ನೀರಿಗೆ ಸಿದ್ದಾಪುರದಲ್ಲಿ ಒಂದು ಆಣೆಕಟ್ಟನ್ನು ಬಾಕಿ ಕುಂದಾಪುರ ಮತ್ತು ಉಡುಪಿ ತಾಲ್ಲೂಕುಗಳ ೧೫ ಸಾವಿರ ಹೆಕ್ಟೇರ್‌ಗಳಷ್ಟು ಭೂಮಿಗೆ ನೀರನ್ನು ಉಣಿಸುವಂಥ ಮತ್ತು ಬ್ರಹ್ಮಾವರ ಸಹಕಾರಿ ಸಕ್ಕರೆ ಕಾರ್ಖಾನೆಗೆ ಸಾಕಾಗುವಷ್ಟು ಕಬ್ಬನ್ನು ಬೆಳೆಸಲಿಕ್ಕೆ ಬೇಕಾದಂಥ ನೀರಾವರಿ ಪ್ರದೇಶವನ್ನು ಮಾಡಿ ಕೊಳ್ಳಲು ಈ ಒಂದು ಯೋಜನೆಗೆ ೧೯೮೦ರಲ್ಲಿ ಶಂಕುಸ್ಥಾಪನೆ ಮಾಡಿದ್ದರೂ ಕೂಡ ಕೆಲವೊಂದು ತಾಂತ್ರಿಕ ಕಾರಣಗಳಿಂದಾಗಿ ಅದು ಮುಂದುವರಿಯಿತು. ಮಾನ್ಯ ಮುಖ್ಯಮಂತ್ರಿಯವರು ಕೊಟ್ಟ ಒಂದು ಮಾಹಿತಿಯ ಪ್ರಕಾರ ೧೯೯೬-೯೭ನೇ ಇಸವಿಯಲ್ಲಿ ಇದಕ್ಕೆ ಬೇಕಾದ ಒಂದು ಸಮೀಕ್ಷೆಯನ್ನು ಕೂಡ ನಡೆಯಿತು, ವರದಿಗಳು ಹೋದವು, ಸುಮಾರು ೭೦ ಕೋಟಿ ರೂಪಾಯಿಗಳ ಖರ್ಚಿನಲ್ಲಿ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುವುದು ಎಂಬ ವಿಚಾರವೂ ಬಂತು. ಆದರೆ ಮೂರು ವರ್ಷಗಳಿಂದ ಈ ಬಗ್ಗೆ ಸಭೆಗಳು ನಡೆಯುತ್ತಿವೆ, ವರದಿಗಳು ಆಗುತ್ತಿವೆ, ತೀರ್ಮಾನ ಮತ್ತು ನೀರಾವರಿ ಅಧಿಕಾರಿಗಳೊಡನೆ ಸಮಾಲೋಚನೆಗಳು ಆಗುತ್ತಿವೆ. ಆದರೂ ಕೂಡ ಕೇಂದ್ರ ಸರಕಾರಕ್ಕೆ ಈ ಒಂದು ಫಾರೆಸ್ಟ್ ಪ್ರದೇಶದ ಬಿಡುಗಡೆ ಮಾಡುವ ಬಗ್ಗೆ ಬರೆಯುವುದಕ್ಕೆ ಇವರಿಂದ ಆಗಲಿಲ್ಲ. ಇದನ್ನು ಅಪಲೋಕಿಸಿದಾಗ ಈ ಯೋಜನೆಯ ಅನುಷ್ಠಾನದ ವಿಚಾರದಲ್ಲಿ ಸರ್ಕಾರಕ್ಕೆ ಎಷ್ಟು ಮಟ್ಟಿಗೆ ಕಾಳಜಿ ಇದೆ ಎಂದು ಅರ್ಥವಾಗುತ್ತದೆ. ಮೂರು ವರ್ಷಗಳಿಂದಲೂ ಆ ಜಾಗವನ್ನು ಬಿಡುಗಡೆ ಮಾಡಿ ಎಂದು ಕೇಂದ್ರ ಸರಕಾರಕ್ಕೆ ಇವರಿಂದ ಹೇಳುವುದಕ್ಕೆ ಆಗಲಿಲ್ಲ. ಹೀಗೆ ಒಂದು ಜಾಗವನ್ನು ಬಿಡುಗಡೆ ಮಾಡುವುದಕ್ಕೆ ಆಗದಿದ್ದರೆ ಇದಕ್ಕೆ ಹಣವ ಪ್ರೊವೈಕೆಯನ್ನು ಹೇಗೆ ಮಾಡುತ್ತಾರೆ ? ಅದನ್ನು ಎಲ್ಲಿಂದ ತಂದುಕೊಳ್ಳುತ್ತಾರೆ ? ಎಂಟನೇ ಯೋಜನೆಯು ಕೂಡ ತಯಾರಾಗುತ್ತಾ ಇದೆ. ಈ ಬಗ್ಗೆ ಕೇಂದ್ರ ಸರ್ಕಾರದವರೂ ಬರೆದುಕೊಳ್ಳಬಹುದು. ಅದು ಬೇಡ ಎಂದರೂ ಮೊದಲಿನ ಸರಕಾರ ಇದಕ್ಕೆ ಅಡಳಿತಾತ್ಮಕ ಮಂಜೂರಾತಿಯನ್ನು ಕೊಟ್ಟಿರುವುದರಿಂದ ಈ ಯೋಜನೆಯನ್ನು ತೆಗೆದುಕೊಳ್ಳುವುದಕ್ಕೆ ಯಾವ ಸಮಸ್ಯೆಯೂ ಇಲ್ಲ. ಮಾನ್ಯ ಶ್ರೀ ದೇವೇಗೌಡರವರು ನೀರಾವರಿ ಮಂತ್ರಿಗಳಾಗಿದ್ದಾಗ, ಸಿದ್ದಾಪುರದ ಒಂದು ಸಭೆಯಲ್ಲಿ ಈ ಯೋಜನೆಯನ್ನು ಕೈಗೆತ್ತಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಅದೇ ಮಾತನ್ನು ಈ ಸದನದಲ್ಲಿ ಕಳೆದ ಎರಡು ವರ್ಷಗಳಿಂದಲೂ ಹೇಳುತ್ತಾ ಬಂದಿದ್ದಾರೆ ಈ ಯೋಜನೆಯನ್ನು ನಾವು ಕೈಗೆತ್ತಿಕೊಳ್ಳುತ್ತೇವೆ, ಆ ಬಗ್ಗೆ ಯಾವುದೇ ಸಂಶಯ ಬೇಡವೆಂದು ಹೇಳಿದ್ದರು. ಬ್ರಹ್ಮಾವರ ಸಕ್ಕರೆ ಕಾರ್ಖಾನೆಯ ಪರಿಸ್ಥಿತಿಯೂ ಕೂಡ ಹೀಗೇ ಇದೆ. ಸುಮಾರು ೧೦ಕೋಟಿ ರೂಪಾಯಿಗಳ...

ಅಧ್ಯಕ್ಷರು. ಮಾನ್ಯ ಮುಖ್ಯಮಂತ್ರಿಯವರು ಉತ್ತರವನ್ನು ಹೇಳಿದ್ದಾರೆ...

ಶ್ರೀ ಜಿ. ಎಸ್. ಆಚಾರ್.—ಅಲ್ಲಿ ಧರಣಿ ನಡೆಯುತ್ತಾ ಇದೆ. ಈ ವಿಚಾರವನ್ನು ನಾನು ಇಲ್ಲಿ ಪ್ರಸ್ತಾಪ ಮಾಡಬೇಕಾಗುತ್ತದೆ. ತಾವುಗಳು ನಮಗೆ ಅವಕಾಶವನ್ನು ಕೊಡಬೇಕು,

ಅಧ್ಯಕ್ಷರು.—ತಮಗೆ ಭಾಷಣ ಮಾಡುವುದಕ್ಕೆ ಅವಕಾಶ ಇಲ್ಲ...

ಶ್ರೀ ಜಿ. ಎಸ್. ಆಚಾರ್.—ನಮ್ಮ ವಿಚಾರಗಳನ್ನು ಪ್ರಸ್ತಾಪಿಸಲು ನಮಗೆ ಇರತಕ್ಕಂಥ ವೇದಿಕೆ ಇದು. ಇಂದಿನ ಒಂದು ಗಮನ ಸೆಳೆಯುವ ಸೂಚನೆ ಬಗ್ಗೆ ಬಹಳ ಹೊತ್ತು ಮಾತನಾಡಲು ತಾವು ಅವಕಾಶವನ್ನು ಕೊಟ್ಟಿದ್ದೀರಿ. ಆದರೆ ನಮಗೆ ಮಾತ್ರ ಮಾತನಾಡುವುದಕ್ಕೆ ಅವಕಾಶ ಕೊಡುವುದಿಲ್ಲ

ಎಂದರೆ ಹೇಗೆ ? ಅವಕಾಶ ಕೊಡಿ. ಇವತ್ತು ಸಕ್ಕರೆ ಕಾರ್ಖಾನೆಗಳು ೬ ಕೋಟಿ ನಷ್ಟದಲ್ಲಿ ನಡೆಯುತ್ತಿದೆ. ಅಲ್ಲಿ ಇವತ್ತು ೫೫ ಸಾವಿರ ಟನ್ ಕಬ್ಬನ್ನು ಅರೆದಿದ್ದಾರೆ. ಈ ವರ್ಷ ಒಂದು ಕಾಸನ್ನೂ ಕೊಡಲಿಲ್ಲವೆಂದರೆ ಅವರು ಕೋರ್ಟಿಗೆ ಹೋಗುತ್ತಾರೆ. ಮಾನ್ಯ ಪೋತದಾರ್‌ರವರು ಮಂತ್ರಿಗಳಾಗಿದ್ದಾಗ ಪೂರಾ ಹಣವನ್ನು ಕೊಡುತ್ತೇವೆನ್ನುವಂತಹ ಆಶ್ವಾಸನೆಯನ್ನು ಕೊಟ್ಟಿದ್ದರು. ಬೇಕಾದರೆ ತಾವು ವರದಿ ತೆಗೆದುನೋಡಿ. ಅವರು ಅಲ್ಲಿ ಧರಣಿಯನ್ನು ಮಾಡುತ್ತಿದ್ದಾರೆ. ಅವರಿಗೆ ನಾವು ಏನು ಉತ್ತರ ಕೊಡಬೇಕು ? ಆ ಕಾರ್ಖಾನೆ ಪ್ರಾರಂಭವಾಗುವುದಿಲ್ಲ. ಇದರಿಂದಾಗಿ ರೈತರಿಗೆ ಹಣವಿಲ್ಲದಂತಾಗುತ್ತದೆ. ವರಾಹಿ ಯೋಜನೆ ಬಂದರೆ ಅವರಿಗೆ ಅನುಕೂಲವಾಗುತ್ತದೆ. ಅರ್ಜಿಯನ್ನು ಕೇಂದ್ರ ಸರ್ಕಾರಕ್ಕೆ ಕಳಿಸುವುದಿಲ್ಲ. ಇದೇ ನಿಮ್ಮ ನಿಲುವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ.—ಉತ್ತರದಲ್ಲಿ ವಿವರಗಳನ್ನೆಲ್ಲಾ ಕೊಟ್ಟಿದ್ದೇನೆ. ಮಾನ್ಯ ಪೊಯಿಲಿಯವರು ಹೇಳಿದ ಹಾಗೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಇರತಕ್ಕಂತಹ ತೊಂದರೆ ಇದು. ಇದರಲ್ಲಿ ಭಿನ್ನಾಭಿಪ್ರಾಯವಿಲ್ಲ. ವರಾಹಿ ಯೋಜನೆಯನ್ನು ಪ್ರಾರಂಭ ಮಾಡುವಂತಹ ಹಂತದಲ್ಲಿ ಅವರ ಸರಕಾರವಿದ್ದಾಗ ಇದನ್ನು ಮಲ್ಟಿ ಪರ್‌ಪಸ್ ಯೋಜನೆಯನ್ನಾಗಿ ಮಾಡಬೇಕೆನ್ನುವ ಆಲೋಚನೆ ಬಂತು. ನಂತರ ಈಗ ಇದು ಕೊನೇ ಹಂತದಲ್ಲಿದೆ. We have finalised. we have agreed for minimum reserve forset. ಹತ್ತು ಅಡಿ ಸತತವಾಗಿ ನೀರು ಹೋಗತಕ್ಕಂಥಾದ್ದರ ಬಗ್ಗೆ ಅಲೈನ್‌ಮೆಂಟ್ ಅನ್ನು ಬದಲಾವಣೆ ಮಾಡಿದ್ದೇವೆ. ಇಲ್ಲದಿದ್ದರೆ ಕೇಂದ್ರ ಸರಕಾರ ಒಪ್ಪುವುದಿಲ್ಲ. ಅತಿ ಕಡಿಮೆ ರಿಸರ್ವ ಫಾರೆಸ್ಟ್ ಏರಿಯಾವನ್ನು ಮುಳುಗಡೆ ಮಾಡತಕ್ಕಂತಹ ಕೆಲಸವನ್ನು ಮಾಡದೇ ಹೋದರೆ ತೊಂದರೆಯಾಗುತ್ತದೆ. ತಜ್ಞರ ಅಭಿಪ್ರಾಯವನ್ನು ಪಡೆದು ಕೊಂಡು ಪ್ರೊಫಾರ್ಮಾವನ್ನು ಇನ್ನು ಒಂದು ವಾರದಲ್ಲಿ ಕೇಂದ್ರ ಸರ್ಕಾರಕ್ಕೆ ಕಳಿಸುವಂತಹ ಆಲೋಚನೆ ಮಾಡಿದ್ದೇವೆ. ಕೇಂದ್ರ ಸರಕಾರ ಕ್ಲಿಯರೆನ್ಸ್ ಮಾಡಿದರೆ ೫೦ ಲಕ್ಷ ಅಲ್ಲಿ ಅವಶ್ಯ ವಿದ್ದರೆ ೨–೩ ಕೋಟಿಯನ್ನು ಬೇಕಾದರೂ ಕೊಡಲಿಕ್ಕೆ ಸಿದ್ಧನಿದ್ದೇನೆ. ಟೆಂಡರ್ ಕರೆಯಲಿಕ್ಕೆ ಅಧಿಕಾರಿಗಳಿಗೆ ಹೇಳಿದ್ದೇನೆ. In anticipation of Government of India's approval, let them go with other work. ಸಕ್ಕರೆ ಕಾರ್ಖಾನೆಗೆ ಕೂಡ ಈ ಯೋಜನೆ ಮೇಲೆ ಎರಡು ಸಲ ಹಣವನ್ನು ಕೊಟ್ಟಿದ್ದೇವೆ ಅಲ್ಲದೆ ಗ್ಯಾರಂಟಿಯನ್ನು ಕೂಡ ಕೊಡುತ್ತಿದ್ದೇವೆ. ಸರಕಾರ ಇವರಿಗೆ ಹೆಚ್ಚು ಹಣ ಕೊಡುವುದಕ್ಕಿಂತ ಯೋಜನೆಯಲ್ಲಿ ಹಣವನ್ನು ಸೇರಿಸಿದರೆ ಸಕ್ಕರೆ ಕಾರ್ಖಾನೆಗಳಿಗೆ ಕೊಡತಕ್ಕಂತಹ ಹಣ ಉಳಿಯುತ್ತದೆ. ರೈತರ ಕಷ್ಟ ನಮಗೆ ಅರ್ಥವಾಗಿದೆ. ಸಕ್ಕರೆ ಕಾರ್ಖಾನೆಯನ್ನು ತೆರೆಯುವಾಗ ಎಲ್ಲಿ ಕಬ್ಬನ್ನು ಹೆಚ್ಚಾಗಿ ಬೆಳೆಯುತ್ತಾರೆ ಆ ಪ್ರದೇಶವನ್ನು ಗಮನದಲ್ಲಿಟ್ಟುಕೊಂಡು ಅಲ್ಲಿ ಕಾರ್ಖಾನೆಯನ್ನು ತೆರೆಯಬೇಕು. ಇದು ಎರಡೂ ಜೊತೆ ಜೊತೆಗೆ ಆಗಬೇಕು. ಇವತ್ತು ಸಕ್ಕರೆ ಕಾರ್ಖಾನೆ ಎಲ್ಲಿ ಇದೆ ಅಲ್ಲಿ ಸರಿಯಾದ ನೀರು, ಕಬ್ಬು ಇಲ್ಲದಂತಾಗಿದೆ. ಸೌತ್ ಕೆನರಾ ಮತ್ತು ಇನ್ನಿತರ ಕಡೆಗಳಲ್ಲಿ ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭ ಮಾಡಿದ್ದಾರೆ. ಆದರೆ ಅಲ್ಲಿ ಸಾಕಷ್ಟು ಕಬ್ಬು ಬೆಳೆಯತಕ್ಕಂತಹ ಪ್ರದೇಶ ಇಲ್ಲ. ಇದರಿಂದಾಗಿ ಅಲ್ಲಿನ ಸಕ್ಕರೆ ಕಾರ್ಖಾನೆಗಳಿಗೆ ನಷ್ಟವಾಗಿದೆ. ಸರಕಾರ ಅದನ್ನು ತುಂಬಬೇಕಾಗಿದೆ. ರೈತರ ಮತ್ತು ಸಕ್ಕರೆ ಕಾರ್ಖಾನೆ ಕಾರ್ಮಿಕರ ಬಗ್ಗೆ ಕೂಡ ಸರಕಾರ ಗಮನ ಕೊಡಬೇಕಾಗುತ್ತದೆ. ಇನ್ನು ಮುಂದೆ ಸಾಕಷ್ಟು ಕಬ್ಬು ಬೆಳೆಯದಿರುವ ಕಡೆಗೆ ಸಕ್ಕರೆ ಕಾರ್ಖಾನೆಯನ್ನು ಕೊಡಕೂಡದು ಎಂಬ ಅಭಿಪ್ರಾಯಕ್ಕೆ ನಾವು ಬಂದಿದ್ದೇವೆ. ಆದರೆ ಹಿಂದೆ ಏನು ಅನುಮತಿಯನ್ನು ಕೊಟ್ಟಿದ್ದೇವೆ ಆ ಕಾರ್ಖಾನೆಗಳ ಪರಿಸ್ಥಿತಿಯನ್ನು ಸರಿಪಡಿಸಬೇಕಾಗಿದೆ. ಇದೇ ವರ್ಷ ಈ ಯೋಜನೆಯನ್ನು ಪ್ರಾರಂಭ ಮಾಡಬೇಕೆಂಬ ಆಜ್ಞೆಯನ್ನು ಅಧಿಕಾರಿಗಳಿಗೆ ನೀಡುತ್ತೇನೆ.

೩) ನಂಜನಗೂಡು ತಾಲ್ಲೂಕಿನಲ್ಲಿರುವ ಜೆಮಿನಿಡಿಸ್ಟಿಲರಿಯಿಂದ ಹೊರ ಬರುತ್ತಿರುವ ಕಲ್ಮಿಷಗಳಿಂದ ದುರ್ನಾತ ಹಾಗೂ ಸುತ್ತಮುತ್ತಲಿರುವ ಹಳ್ಳಿಗಳ ಜನತೆಗೆ ಮತ್ತು ಪ್ರಾಣಿಗಳಿಗೆ ಆಗುತ್ತಿರುವ ತೊಂದರೆಯ ಬಗ್ಗೆ

ಶ್ರೀ ಡಿ. ಟಿ. ಜಯಕುಮಾರ್.—ಮಾನ್ಯ ಅಧ್ಯಕ್ಷರೇ, ನಂಜನಗೂಡು ತಾಲ್ಲೂಕಿನಲ್ಲಿರುವ ಜೆಮಿನಿ ಡಿಸ್ಟಿಲರಿಯಿಂದ ಹೊರ ಬರುತ್ತಿರುವ ಕಲ್ಮಷಗಳಿಂದ ದುರ್ನಾತ ಹಾಗೂ ಸುತ್ತಮುತ್ತಲಿರುವ ಹಳ್ಳಿಗಳ ಜನತೆಗೆ ಮತ್ತು ಪ್ರಾಣಿಗಳಿಗೆ ಆಗುತ್ತಿರುವ ತೊಂದರೆಯ ಬಗ್ಗೆ ಮಾನ್ಯ ವಾಣಿಜ್ಯ ಮತ್ತು ಕೈಗಾರಿಕಾ ಮಂತ್ರಿಯವರ ಗಮನ ಸೆಳೆಯುತ್ತೇನೆ.